**O.S. 131-21** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 14.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ಶ್ರೀ A V S, ವಕೀಲರಿಂದಃ**

3. ನಾನು ಉಳಿದ ವಾದಿಗಳ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಕಲ್ಲಪ್ಪ ಗದಿಗೆಪ್ಪ ನವಲೂರ ನನ್ನ ತಂದೆ. 1 ನೇ ಪ್ರತಿವಾದಿ ದಾವಾ ಆಸ್ತಿ ಶೆಡ್ಯೂಲ್ ನಂಃ 1, ಬ್ಲಾಕ್ ನಂಃ 93/2 ಎ, 2 ಎಕರೆ 11 ಗುಂಟೆ 7 ನೇ ಪ್ರತಿವಾದಿಗೆ 2003 ರಲ್ಲಿ ಮಾರಾಟ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಆಗ ನನ್ನ ವಯಸ್ಸು 14 ಅಂದರೆ ಸರಿ. ನನಗಿಂತ ಒಬ್ಬರು ದೊಡ್ಡವರು ಇದ್ದಾರೆ, ಒಬ್ಬರು ಸಣ್ಣವರಿದ್ದಾರೆ, ಬ್ಲಾಕ್ ನಂಃ 93/2 ಎ, ನಮ್ಮ ಅಜ್ಜ ಮರಣ ಹೊಂದಿದ ನಂತರ ನಮ್ಮ ತಂದೆ ಅಣ್ಣ -ತಮ್ಮಂದಿರ ನಡುವೆ ವಾಟ್ನಿಯಾದಾಗ ನಮ್ಮ ತಂದೆ ಪಾಲಿಗೆ ಬಂದಿದೆ ಅಂದರೆ ಸರಿ. ಇದು ಒಣ ಬೇಸಾಯದ ಜಮೀನು ಅಂದರೆ ಸರಿ ನಮ್ಮ ತಂದೆಗೆ ವ್ಯವಸಾಯದ ಆದಾಯ ಬಿಟ್ಟರೆ ಬೇರೆ ಆದಾಯ ಇಲ್ಲ ಅಂದರೆ ಸರಿ. ನನ್ನ ಅಕ್ಕ ರೇಣುಕಾ ರವರ ಮದುವೆ ಮಾಡಿದಾಗ ನಮ್ಮ ತಂದೆ ಸಾಲ ಮಾಡಿದ್ದರು ಅಂದರೆ ಸರಿಯಲ್ಲ. ಸಾಲ ತಿರುವಳಿ ಮಾಡಲು ಮನೆತನದ ಅಡಚಣೆ ಸಲುವಾಗಿ ಮೇಲೆ ಹೇಳಿದ ಜಮೀನನ್ನು ನಮ್ಮ ತಂದೆ 7 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾನೆ ಅಂದರೆ ಸರಿಯಲ್ಲ. 7 ನೇ ಪ್ರತಿವಾದಿ ಸುತಗಟ್ಟಿ ಗ್ರಾಮದ ಸುತ್ತಮುತ್ತ 200 ಎಕರೆಯಷ್ಟು ಭೂ-ಅಭಿವೃದ್ಧಿಗೆ ಖರೀದಿ ಮಾಡಿರಬಹುದು. ಈಗ 7 ನೇ ಪ್ರತಿವಾದಿ ಭೂ-ಅಭಿವೃದ್ಧಿ ಮಾಡಿ ಪ್ಲಾಟ್ ಮಾಡಿ ಮಾರಾಟ ಮಾಡುವ ಕಾಲಕ್ಕೆ ತೊಂದರೆ ಉಂಟಾಗಲಿ ಎಂದು ಮತ್ತು ಹೆಚ್ಚಿನ ಹಣದ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. 2003 ರಲ್ಲಿ 7 ನೇ ಪ್ರತಿವಾದಿ ನಮ್ಮ ತಂದೆಗೆ ಹೆಚ್ಚಿನ ದರ ಕೊಟ್ಟು ಖರೀದಿ ಮಾಡಿದ್ದಾರೆ ಅಂದರೆ ಗೊತ್ತಿಲ್ಲ. ಪ್ರತಿವಾದಿ 1 ರಿಂದ 6 ರವರು ನಮ್ಮ ಕುಟುಂಬದವರು ಅಂದರೆ ಸರಿ. ಪ್ರತಿವಾದಿ 1 ರಿಂದ 6 ರವರು ಪ್ರತಿವಾದ ಪತ್ರ ಸಲ್ಲಿಸಿಲ್ಲ. ನಾವು ಹಾಗೂ ಪ್ರತಿವಾದಿ 1 ರಿಂದ 6 ರವರು 7 ನೇ ಪ್ರತಿವಾದಿ ಕಡೆಯಿಂದ ಹೆಚ್ಚಿನ ಹಣ ವಸೂಲಿ ಮಾಡಲು ಸುಳ್ಳು ದಾವೆ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. ಆಸ್ತಿ ಬೆಲೆ ಹೆಚ್ಚಾಗಿದ್ದರಿಂದ ಹಣ ವಸೂಲಿ ಮಾಡಲು ದಾವೆ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ. ನಮ್ಮ ತಂದೆ ನಮ್ಮ ಮೂಲಕ ದಾವೆ ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲ. ನಾವು ಸುತಗಟ್ಟಿಯಲ್ಲಿಲ ಮನೆ ಹಾಕಿಸಿಕೊಂಡಿದ್ದೇವೆ. 7 ನೇ ಪ್ರತಿವಾದಿ ಖರೀದಿ ಮಾಡಿದ ನಂತರ ಮಾಲಿಕನಾಗಿ ತನ್ನ ಹೆಸರನ್ನು ಉತಾರದಲ್ಲಿ ಹಚ್ಚಿಕೊಂಡಿದ್ದಾನೆ ಅಂದರೆ ಗೊತ್ತಿಲ್ಲ. ಹಳೆ ಉತಾರ ಹಚ್ಚಿ ಕೇಸ ಹಾಕಿದ್ದೇವೆ ಅಂದರೆ ಸರಿಯಲ್ಲ.

**O.S. 131-21** **PW : 1**

ಉದ್ದೇಶಪೂರ್ವಕವಾಗಿ ಚಾಲ್ತಿ ಉತಾರ ಹಾಜರಪಡಿಸಿಲ್ಲ ಅಂದರೆ ಸರಿಯಲ್ಲ. ಕಾಲಮಿತಿಯಲ್ಲಿ ದಾವೆಯನ್ನು ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ನಮ್ಮ ತಂದೆ ಖರೀದಿ ಹಣದಿಂದ ನಮ್ಮನ್ನು ಪೋಷಣೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. 7 ನೇ ಪ್ರತಿವಾದಿ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪ್ರತಿವಾದಿ ನಂಃ 9 ರ ಪರ ವಕೀಲರು ಗೈರು ಹಾಜರಾಗಿರುವುದರಿಂದ ಅವರ ಪರವಾಗಿ ಪಾಟಿ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.